ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 15/1/21

# ಸಿಪಿವೈ ಸಾಲ ಮಾಡಿ ನಮ್ಮನ್ನು ಒಗ್ಗೂಡಿಸಿದ್ದರು

## ಈಗ ಆರೋಪಿಸುವವರು ಆಗ ಎಲ್ಲಿ ಹೋಗಿದ್ದರು? ■ 9 ಕೋಟಿ ಸಾಲ ಮಾಡಿದ್ದರು: ರಮೇಶ್

ಬೆಳಗಾವಿ: ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್‌ಗೆ ಸಚಿವ ಸ್ಥಾನ ನೀಡಿರುವುದಕ್ಕೆ ಕೆಲವು ಶಾಸಕರು ಅಸಮಾಧಾನಗೊಂಡಿದ್ದು, ಅವರ ವಿರುದ್ಧ ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಕಿಡಿಕಾರಿದ್ದಾರೆ.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, ಯೋಗೇಶ್ವರ್‌ಗೆ ಅಂದು ನಮ್ಮನ್ನು ಒಗ್ಗೂಡಿಸುವ ಕೆಲಸ ಏಕೆ ಬೇಕಿತ್ತು? ಕಷ್ಟಪಟ್ಟು ಆರೋಗ್ಯ ಹಾಳು ಮಾಡಿಕೊಂಡು, ಸಾಲ ಮಾಡಿಕೊಳ್ಳುವುದು ಏಕೆ ಬೇಕಿತ್ತು. ಅವರು ತಮ್ಮ ಮನೆಯ ಮೇಲೆ 9 ಕೋಟಿ ರೂ. ಸಾಲ ಮಾಡಿಕೊಂಡರು. ಎಂ.ಟಿ.ಬಿ. ನಾಗರಾಜ್ ಕಡೆಯಿಂದ ಸಿ.ಪಿ.ಯೋಗೇಶ್ವರ್ ಅಂದು ಸಾಲ ತಂದರು. ಇದು ಏಕೆ ಬೇಕಿತ್ತು? ಈಗ ಮಾತನಾಡುವವರು ಆಗ ಎಲ್ಲಿದ್ದರು? ಯೋಗೇಶ್ವರ್‌ಗೆ ಸಚಿವ ಸ್ಥಾನ ಸಿಕ್ಕಿರುವುದು ಸರಿಯಾಗಿದೆ. ಈ ಸರ್ಕಾರದ ರಚನೆಯಲ್ಲಿ ಯೋಗೇಶ್ವರ್ ಪಾತ್ರ ಬಹಳ ದೊಡ್ಡದಿದೆ ಎಂದರು.



ಭ್ರಷ್ಟರಿಗೆ ರಮೇಶ್ ಜಾರಕಿಹೊಳಿ ಸಾಥ್ ಕೊಡುತ್ತಿದ್ದಾರೆ ಎನ್ನುವ ವಿಶ್ವನಾಥ್ ಹೇಳಿಕೆ ನನಗೆ ಆಶೀರ್ವಾದ. ಅವರ ಬಗ್ಗೆ ನೋ ಕಮೆಂಟ್ಸ್. ಹಾಗೂ, ತಾವು ಚುನಾವಣೆ ಬಳಿಕ ಸಂಪುಟ ವಿಸ್ತರಣೆ ಆಗಬಹುದು. ಹೈಕಮಾಂಡ್ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿದೆ. ರೇಣುಕಾಚಾರ್ಯ ಹಾದಿಬೀದಿಯಲ್ಲಿ ಬಹಿರಂಗ ಮಾಡಲಿ. ಅವನ್ನು ಇಟ್ಟುಕೊಂಡು ಕೂಡುವ ಬದಲು ಬಹಿರಂಗ ಮಾಡಿದರೆ ಒಳ್ಳೆಯದು ಎಂದರು.

ಮುರುಗೇಶ ನಿರಾಣಿ ವಿಜಯೇಂದ್ರ ಬಳಿ ದುಡ್ಡು ಕೊಟ್ಟು ಸಚಿವರಾಗಿದ್ದಾರೆ ಎನ್ನುವ ಯತ್ನಾಳ ಹೇಳಿಕೆ ಅವರ ವೈಯಕ್ತಿಕ ವಿಚಾರ. ಈ ಕುರಿತು ಅವರನ್ನೇ ಕೇಳುವುದು ಒಳ್ಳೆಯದು. ಯತ್ನಾಳ ಬಹಳ ಹಿರಿಯರು. ಅವರು ಮಂತ್ರಿಯಾಗಬೇಕು ಅಂತ ನಮಗೆ ಆಸೆ ಇದೆ. ಅವರಿಂದ ಪಕ್ಷಕ್ಕೆ ಒಳ್ಳೆಯದಾಗುತ್ತದೆ. ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿ ಅಂತಾ ಬಯಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ ಹೈಕಮಾಂಡ್ ಜತೆಗೆ ಮಾತಾಡಿ ಮುನಿರತ್ನ ಅವರನ್ನು ಮಂತ್ರಿ ಮಾಡುತ್ತೇವೆ. ಸಿಡಿ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ರೀತಿ ಸಿಡಿಗಳು ಬರುತ್ತವೆ, ಹೋಗುತ್ತವೆ. ರಾಜಕಾರಣದಲ್ಲಿ, ವೈಯಕ್ತಿಕ ಜೀವನದಲ್ಲಿ ಈ ರೀತಿ ಮಾತಾಡಬಾರದು. ಏನು ಸಿಡಿ ಇವೆ ಎನ್ನುವುದು ಗೊತ್ತಿಲ್ಲ. ರಾಜಕಾರಣದಲ್ಲಿ ಅವರ ವೈಯಕ್ತಿಕ ಜೀವನದಲ್ಲಿ ಕೆಲ ಘಟನೆಗಳು ಇರುತ್ತವೆ. ಅವರ ಬಗ್ಗೆ ಮಾತಾಡಬಾರದು ಎಂದರು.

### ಬಿಎಸ್‌ವೈ ಹೆದರುವ ನಾಯಕನಲ್ಲ

ನಮ್ಮ ಯಡಿಯೂರಪ್ಪ ಬ್ಲ್ಯಾಕ್‌ಮೇಲ್‌ಗೆ ಹೆದರುವ ನಾಯಕ ಅಲ್ಲ. ಅವರು ಜೀವನದುದ್ದಕ್ಕೂ ಹೋರಾಟ ಮಾಡಿಕೊಂಡು ಬಂದ ಮನುಷ್ಯ. ಒಂದು ವೇಳೆ ನಾಯಕತ್ವ ಬದಲಾವಣೆಯಾದರೆ ನಾವು ಯಡಿಯೂರಪ್ಪ ಪರವಾಗಿ ಇರುತ್ತೇವೆ. ಕಷ್ಟದಲ್ಲಿರುವ ರಾಜಕಾರಣಿಗಳಿಗೆ ಪೂರ್ತಿ ಸಪೋರ್ಟ್ ಮಾಡಬೇಕು. ಅವರನ್ನ ಬ್ಲ್ಯಾಕ್‌ಮೇಲ್ ಮಾಡಬಾರದು ಎಂದು ರಮೇಶ ಜಾರಕಿಹೊಳಿ ಹೇಳಿದರು.

**ನಾನು ಕ್ಯಾಪ್ಟನ್ ಅಲ್ಲ, 17 ನೇಯವನು:** ದೊಡ್ಡ ಪಕ್ಷದಲ್ಲಿ ಅಸಮಾಧಾನ ಸಹಜ. ಅದನ್ನು ಪಕ್ಷದವರು ಸರಿಪಡಿಸುತ್ತಾರೆ. ಮುನಿರತ್ನ ಜತೆ ಫೋನ್‌ನಲ್ಲಿ ಮಾತಾಡಿದ್ದೇನೆ. ನಾನು ಬಾಂಬೆ ಟೀಮಿನ ಕ್ಯಾಪ್ಟನ್ ಅಲ್ಲ. ಕೊನೆಯ ಹದಿನೇಳನೆಯವನು. ಮುನಿರತ್ನ ಮತ್ತು ನಾಗೇಶ್ ಪಾಪ ಅನ್ನಾರ ಅಂತಾ ನನಗೆ ಕಲ್ಪನೆ ಇರಲಿಲ್ಲ ಎಂದು ರಮೇಶ ಜಾರಕಿಹೊಳಿ ಹೇಳಿದರು.